**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆಃ** 491/2023

**ಸಾಕ್ಷಿಯನ್ನು ದಿಃ 15.12.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಶಿವಣ್ಣ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 4 |
| ತಂದೆಯ ಹೆಸರು | ನಿಂಗಣ್ಣಯ್ಯ | | |
| ವಯಸ್ಸು | 60 ವರ್ಷ | | |
| ಕೆಲಸ | ಸೌದೆ ವ್ಯಾಪಾರ | | |
| ವಾಸಸ್ಥಳ | ಕಲ್ಲುಣಿಕೆ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ-1 ರಿಂದ 3 ಮತ್ತು ಆರೋಪಿತರು ಗೊತ್ತು. ಅವರೆಲ್ಲರೂ ನನ್ನ ಊರಿನವರು. ನನಗೆ ಘಟನೆಯ ಬಗ್ಗೆ ಗೊತ್ತಿಲ್ಲ. ನಾನು ಯಾವುದೇ ಗಲಾಟೆಯನ್ನು ನೋಡಿಲ್ಲ ಮತ್ತು ಗಲಾಟೆಯನ್ನು ಬಿಡಿಸಿಲ್ಲ. ಪೋಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿನಾಂಕಃ 03.07.2023ರಂದು ಸಂಜೆ 4.15ರ ಸಮಯದಲ್ಲಿ ನಾನು ಸರ್ಕಲ್ ಬಳಿ ಇದ್ದಾಗ ಚಾಸಾ-2ರವರು ಅಲ್ಲಿಯೆ ಇದ್ದು, ಆಗ ಆರೋಪಿತರು ಏಕಾ ಏಕಿ ಚಾಸಾ-2ರವರ ಬಳಿ ಬಂದು, ಏನೋ ಬೊಳಿ ಮಗನೇ ಮಣ್ಣು ತುಂಬಿರುವ ವಿಚಾರದಲ್ಲಿ ಗಲಾಟೆ ಮಾಡಿದ್ದಿಯಂತೆ ಎಂದು 1ನೇ ಆರೋಪಿ ಚಾಸಾ-2 ರವರನ್ನು ತಬ್ಬಿ ಹಿಡಿದುಕೊಂಡರು ಎಂದರೆ ಸರಿಯಲ್ಲ. ಆಗ 2ನೇ ಆರೋಪಿಯು ಚಾಸಾ-2ರವರ ಮೈಕೈಗೆ ಗುದಿದ್ದ ಎಂದರೆ ಸರಿಯಲ್ಲ. ಆಗ 3ನೇ ಆರೋಪಿ ಅಲ್ಲಿಯೇಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಚಾಸಾ-2 ರವರ ಎಡ ಭುಜ ಮತ್ತು ತಲೆಯ ಎಡಭಾಗಕ್ಕೆ ಹೊಡೆದರು ಎಂದರೆ ಸರಿಯಲ್ಲ. ನಾನು

ಮತ್ತು ಚಾಸಾ-3 ರವರು ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಚಾಸಾ-2 ರವರನ್ನು ಚಾಸಾ-3 ರವರು ಆಟೋದಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ ವಿವರವಾದ ಹೇಳಿಕೆಯನ್ನು ದಿಃ 15.07.2023 ರಂದು ಪೋಲಿಸರ ಮುಂದೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. SSG ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.